ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್, 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನಾ ನಡೆಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯೂಟಿ ಕನ್ಸರ್ವೇಟರ್‌ರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ್ 1907 ...	200
ಡಿಟೋ ..	ಸಾಗರ ...	21ನೆ ಡಿಟೋ ..	150
ಡಿಟೋ ..	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ..	ತರೀಕೆರೆ ...	28ನೆ ಡಿಟೋ ...	250
ಡಿಟೋ ..	ಚಿಕ್ಕಮಗಳೂರು ...	2ನೆ ಡಿಸೆಂಬರ್ 1907 ..	350
ಹಾಸನ ..	ಹಾಸನ ...	5ನೆ ಡಿಟೋ ..	150
ಬೆಂಗಳೂರು ..	ಬೆಂಗಳೂರು ...	9ನೆ ಡಿಟೋ ..	100
ಮೈಸೂರು ..	ಶ್ರೀರಂಗಪಟ್ಟಣ ...	12ನೆ ಡಿಟೋ ..	250
ಡಿಟೋ ...	ಹುಣಸೂರು	16ನೆ ಡಿಟೋ	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಟ್ಟು, ಮೊತ್ತ ಮತ್ತು ಇತರ ತಪಶೀಲುಗಳು ಒರುವ ಅಕ್ಟೋಬರ್ ಮಾಹಹು ಆಖ್ಬೆರುನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಇಸ್ತಿಹಾರ್ನಾಮಾ, ತಾರೀಖು 28ನೆ ಅಕ್ಟೋಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಲೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ದಿವಿ 12 ಘಂಟೆಗೆ ಹರಾಜು ಪ್ರಾರಂಭಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ. ನಂಬರ್.	ಸಲೆ ಅಡಿ. ಅಡಿ.	ಷರಾ.
1	ಮೈಸೂರು ಉಡಿಯಾರ್ಡ್	27-11-07	ಸಾಗ್ವಾನಿ ...	1,200	30,000	
			ಹೊನ್ನೆ ...	100	20,000	
			ಮತ್ತಿ ...	150	3,000	
			ಸಾಗ್ವಾನಿ ಸರ ...	2,000	2,000	
			ಬೀಡೆ ...	160	2,000	
2	ನಂಜನಗೂಡು ಡಿಪೋ.	28-11-07	ಸಾಗ್ವಾನಿ ...	200	5,000	
			ಹೊನ್ನೆ ...	200	5,000	
			ಮತ್ತಿ ...	180	2,000	
			ಬೀಡೆ ...	100	2,000	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮಾಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪುದಲ್ಲಿ ಇದಕ್ಕೆ ಸೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೀರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮಾರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚಾವುಬೀನಾ ಕಿಮ್ಮತ್ತು ಪ್ರಾರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚಾವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾನನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಯ 1907ನೆ ಇಸವಿ ಸೆಪಟಂಬರ್ ತಾರೀಖು 23ರಲ್ಲು ನಡದ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗಿನಲ್ಲಿ ಆದ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರ್, ಬಿ.ಎ., ಬಿ.ಎಲ್., ಪ್ರೆಸಿಡೆಂಟರು.
2. ,, ಬಿ. ವೆಂಕೋಬರಾವ್, ಬಿ.ಎ. ವೈಸ್ ಪ್ರಸಿಡೆಂಟರು.
3. ,, ಕೆ. ಶ್ರೀನಿವಾಸರಾಮರು, ಮಾಲೂರು ಡಿವೀಜ್ ಅಸಿಸ್ಟೆಂಟ್ ಕಮಿಷನರು.
4. ,, ಜಿ. ಆರಾವಮುದ್ದೈಯ್ಯಂಗಾರ್, ಬಿ.ಎ., ಬಿ.ಎಲ್., ಚಿಕ್ಕಬಳ್ಳಾಪುರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು.
5. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.
6. ,, ಎಸ್. ಗೋಪಾಲರಾವ್, ಸ್ಕೂಲುಗಳ ಡಿಪ್ಯೂಟಿ ಇನ್ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಜ್ (ಡಿ)

1. ಮೆ॥ ಮುನಿನಾರಣಯ್ಯ ಶೆಟ್ಟರವರು.
2. ,, ರಾಮರಾಯರವರು, ಮಾಲೂರು.
3. ,, ದೊಂತಿ ಚಿಕ್ಕಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಎಂ. ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಗೈಯ್ಯನವರು, ಬವರಿಂಗಪೇಟೆ.
6. ,, ಕಾಸ್ಟಿ ಹೈದರಿಸಾಹೇಬರವರು, ಮುಳಬಾಗಲು.
7. ,, ಲಕ್ಷ್ಮಣರಾಯರವರು, ಗುಡಿಬಂಡೆ.
8. ,, ರಾಮಣ್ಣನವರು, ಗೋರಿಬಿದನೂರು.
9. ,, ನಾರಾಯಣಸಾಮಿಶೆಟ್ಟರು, ಚಿಕ್ಕಬಳ್ಳಾಪುರ.
10. ,, ಪಿ. ತಿಮಪ್ಪನವರು, ಬಾಗೇಪಲ್ಲಿ.

ಕ್ಲಾಸ್ (ಇ)

11. ಮೆ॥ ಬಸವೇಗೌಡರವರು, ಬವರಿಂಗಪೇಟೆ.
12. ,, ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಗೌಡಗೆರೆ ಕೃಷ್ಣಾಚಾರ್ರು, ಗೋರೀಬಿದನೂರು.

ಗೈರ್ ಹಾಜರು.

ಎಕ್ಸ್ ಅಫಿಷಿಯೊ ಮೆಂಬರು.

ಮೆ॥ ಹನುಮಾನ್ ಸಿಂಗ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.